
DR MEENAKSHI RAMACHANDRA

56

ಕಿರು ಕಾದಂಬರಿ

# ನರಾಧಮರ ನಡುವೆ



ಡಾ. ಮೀನಾಕ್ಷಿ ರಾಮಚಂದ್ರ

# ಅನುವಾದಕರ ಪರಿಚಯ

## ಡಾ. ಮೀನಾಕ್ಷಿ ರಾಮಚಂದ್ರ




ಗಡಿನಾಡ ಕನ್ನಡಿಗಳಾಗಿ ಕಾಸರಗೋಡಿನಲ್ಲಿ ಜನಿಸಿದ ಡಾ. ಮೀನಾಕ್ಷಿ ರಾಮಚಂದ್ರ ಕನ್ನಡ, ಮಲಯಾಳಂ, ಇಂಗ್ಲಿಷ್ ಹಾಗೂ ತುಳುವಿನಲ್ಲಿ ಸ್ವತಂತ್ರ ಹಾಗೂ ಅನುವಾದ ಕೃತಿಗಳನ್ನು ರಚಿಸಿದ್ದಾರೆ. ಸಂಶೋಧನೆ, ಸಂಪಾದನೆ, ಭಾಷಾಂತರಗಳೊಂದಿಗೆ ಕೇರಳ ಸರಕಾರ ಪ್ರಾಯೋಜಿತ ಕನ್ನಡ–ಮಲಯಾಳಂ ನಿಘಂಟು ರಚನಾ ಕಾರ್ಯದಲ್ಲೂ ಕೈಜೋಡಿಸಿದವರು. ವೃತ್ತಿಯಲ್ಲಿ ಮಂಗಳೂರಿನ ಬೆಸೆಂಟ್ ಮಹಿಳಾ ಕಾಲೇಜಿನಲ್ಲಿ ಸುದೀರ್ಘಕಾಲ ಕನ್ನಡ ಪ್ರಾಧ್ಯಾಪಕಿಯಾಗಿ, ವಿಭಾಗ ಮುಖ್ಯಸ್ಥೆಯಾಗಿ ದುಡಿದು ನಿವೃತ್ತಿ ಹೊಂದಿದರೂ, ಪ್ರವೃತ್ತಿಯಲ್ಲಿ ಬರವಣಿಗೆ ಮತ್ತು ರಂಗಭೂಮಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು. ಮಂಗಳೂರಿನಲ್ಲಿ ಸಮಾನ ಮನಸ್ಕರನ್ನು ಸೇರಿಸಿಕೊಂಡು "ಕಲಾಭಿ" ಎನ್ನುವ ರಂಗಸಂಸ್ಥೆಯೊಂದನ್ನು ಹುಟ್ಟುಹಾಕಿ, ಅದರ ವಿಶ್ವಸ್ಥ ಮಂಡಳಿ ಹಾಗೂ ಅಧ್ಯಕ್ಷ ಸ್ಥಾನದಲ್ಲಿದ್ದು, ಹಲವಾರು ರಂಗಕೇಂದ್ರಿತ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುತ್ತಾ ಬಂದಿರುವವರು. ಅದರೊಂದಿಗೆ ಪ್ರಸ್ತುತ ಮಂಗಳೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾನೂನು ಕಾಲೇಜಿನಲ್ಲಿ ಪ್ರಾಧ್ಯಾಪಿಕೆಯಾಗಿ ಸೇವೆ ಸಲ್ಲಿಸುತ್ತಿರುವರು.

ಅಖಿಲ ಭಾರತ ಮಟ್ಟದ ಕಾವ್ಯ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ ಕಥಾ ಪ್ರಶಸ್ತಿ, ಗಡಿನಾಡ ರಾಜ್ಯೋತ್ಸವ ಪ್ರಶಸ್ತಿ, ಕಲ್ಲಚ್ಚು ಪ್ರಶಸ್ತಿ, ದೇವರ ದಾಸಿಮಯ್ಯ ಪ್ರಶಸ್ತಿ, ಕೇರಳ ಸಹಸ್ರಮಾನೋತ್ಸವ ಪ್ರಶಸ್ತಿಗಳೊಂದಿಗೆ ಚುಟುಕು ಸಾಹಿತ್ಯ ಪರಿಷತ್ತು, ಕೇರಳ ಲೈಬ್ರೆರಿ ಅಸೋಸಿಯೇಷನ್, ಕರ್ನಾಟಕ ದೇವಾಂಗ ಸಂಘ, ಕೇರಳ ಪದ್ಮಶಾಲಿಯಾ ಅಸೋಸಿಯೇಷನ್, ಅಬ್ಬಕ್ಕೋತ್ಸವ ಸಮಿತಿ ಮುಂತಾದ ಹಲವು ಸಂಘ ಸಂಸ್ಥೆಗಳಿಂದ ಸನ್ಮಾನಿಸಲ್ಪಟ್ಟವರು.

58

Ayodhya
PUBLICATIONS
67



# ನರಾಧಮರ ನಡುವೆ

ಮಲಯಾಳಂ ಮೂಲ: ಎಸ್. ಮಹಾದೇವನ್ ತಂಬಿ
ಕನ್ನಡ ರೂಪ : ಡಾ. ಮೀನಾಕ್ಷಿ ರಾಮಚಂದ್ರ

SHRI DHARMASTHALA MANJUNATHESHWARA

# Naraadhamara Naduve

A Malyalam Novel by : **S Mahadevan Thampi** ("Abhayarthikal")
Translated Abridged Version by : **Dr. Meenakshi Ramachandra**

**Ayodhya**
PUBLICATIONS

Published by: **Ayodhya Publications Pvt. Ltd.**
#1571, 36th cross, Dr. Puneeth Rajkumar Road,
Banashankari 2nd stage, Bangalore - 560070.
**Mobile:** 9620916996.
**E-mail:** ayodhyapublications@gmail.com

No part of this publication may be reproduced or transmitted in any form or by any means, electronic or mechanical, including photocopy, recording or any information storage and retrieval system, without permission in writing from the publisher/ Writer.

ಹಕ್ಕುಗಳು: ಲೇಖಕರದು
ಮೊದಲ ಮುದ್ರಣ: 2023
ಕಾಗದ ಬಳಕೆ: 70 ಜಿಎಸ್‌ಎಂ ಬುಕ್‌ಪ್ರಿಂಟ್
ಗಾತ್ರ: 1/8 ಡೆಮಿ ಸೈಜ್ ◆ ಪುಟಗಳು: 44 ◆ ಬೆಲೆ: ರೂ. 60/-
ಮುಖಪುಟ ವಿನ್ಯಾಸ: ಪ್ರಶಾಂತ್ ಭಟ್ಟ
ಒಳಪುಟ ವಿನ್ಯಾಸ: ಉಮಾದೇವಿ ಎಸ್. ಎಲ್.

ISBN: 978-93-91852-62-7

ಮುದ್ರಣ: ಪ್ರಿಂಟ್‌ಒನ್ ಡಿಜಿಟಲ್

SCAN HERE

**Buy our books @**
**www.ayodhyabooks.com**
**Mobile: 9620916996**

# ಅನುವಾದಕಿಯ ನುಡಿ

ಮಲಯಾಳಂ ಸಾಹಿತ್ಯ ಲೋಕದ ಪ್ರಖ್ಯಾತ ಲೇಖಕರಾದ ಶ್ರೀ ಮಹಾದೇವನ್ ತಂಬಿಯವರ "ಅಭಯಾರ್ಥಿಗಳು" ಎನ್ನುವ ಕಿರು ಕಾದಂಬರಿಯನ್ನು ಅನುವಾದಿಸುವ ಅವಕಾಶವನ್ನು 2008ರಲ್ಲಿ ಹೊಸದಿಗಂತ ಪತ್ರಿಕೆಯ ಸಂಪಾದಕರು ನನಗೆ ಇತ್ತರು. ನವೆಂಬರ್ 2008ರಿಂದ ಹೊಸದಿಗಂತ ಪತ್ರಿಕೆಯ ಸಾಪ್ತಾಹಿಕ ಸಿರಿಯಲ್ಲಿ ಕ್ರಮವಾಗಿ ಐದು ಭಾಗಗಳಾಗಿ ಈ ಕಾದಂಬರಿಯು ಪ್ರಕಟವಾಗಿತ್ತು. ಕಾಶ್ಮೀರದ ಪಂಡಿತರ ಮೇಲೆ ನಡೆದ ದೌರ್ಜನ್ಯದ ನೈಜ ಚಿತ್ರವನ್ನು ಕಥೆಯಾಗಿಸಿ, ಮನಮಿಡಿಯುವ ರೀತಿಯಲ್ಲಿ ಹೆಣೆದು ಎಳೆ ಎಳೆಗಳಾಗಿ ಚಿತ್ರೀಕರಿಸಿದ ಈ ಕಾದಂಬರಿ 'ಕಾಶ್ಮೀರ್ ಫೈಲ್ಸ್'ಗಿಂತಲೂ ಮೊದಲೇ ಪ್ರಕಟವಾಗಿತ್ತು ಎನ್ನುವುದು ಗಮನಾರ್ಹ. ಇಲ್ಲಿ ವಿವರಿಸಲ್ಪಟ್ಟ ದೌರ್ಜನ್ಯಗಳು ಕ್ರೌರ್ಯದ ಪರಮಾವಧಿಯಾಗಿ, ಮಾನವನೊಳಗಿನ ದಾನವತ್ವ ಪ್ರಕಟ ರೂಪ ತಾಳಿದಾಗ ಎಂತಹ ಕಾರ್ಯಕ್ಕೂ ಆತ ಹೇಸುವುದಿಲ್ಲ ಎನ್ನುವುದನ್ನು ಬಯಲುಮಾಡುತ್ತದೆ. ಕಾದಂಬರಿಯನ್ನು ಅನುವಾದಿಸುವ ಸಂದರ್ಭದಲ್ಲಿ ಮನಸ್ಸು ಪ್ರಕ್ಷುಬ್ಧವಾಗಿ ಅನುವಾದಿಸಲಾಗದೆ ಪೆನ್ನು ಕೆಳಗಿಟ್ಟು ನಿಟ್ಟುಸಿರಿನೊಂದಿಗೆ ಕಣ್ಣೀರು ಹನಿಸಿದ ಆ ದಿನಗಳನ್ನು ನಾನೆಂದಿಗೂ ಮರೆಯಲಾರೆ.

ಅನಿರೀಕ್ಷಿತವಾಗಿ ಭೇಟಿಯಾದ ಈ ನಾಡಿನ ಪ್ರಖ್ಯಾತ ಚಿಂತಕ ರೋಹಿತ್ ಚಕ್ರತೀರ್ಥರಲ್ಲಿ ನನ್ನ ಅನುವಾದ ಸಾಹಿತ್ಯಗಳ ಬಗ್ಗೆ ಮಾತನಾಡುತ್ತಿರುವ ಸಂದರ್ಭದಲ್ಲಿ ಈ ಪುಸ್ತಕದ ವಿಷಯ ಪ್ರಸ್ತಾಪಕ್ಕೆ ಬಂತು. ಆ ಕೂಡಲೇ ಅವರು ಭೂತಕಾಲಕ್ಕೆ ಸಂದುಹೋದ ಇದನ್ನು ಮತ್ತೆ ಬೆಳಕಿಗೆ ತರುವಲ್ಲಿ ಆಸಕ್ತಿ ವ್ಯಕ್ತಪಡಿಸಿದರು. ಹೊಸದಿಗಂತ ಪತ್ರಿಕೆಯ ಗೋದಾಮು ಸೇರಿದ್ದ ಇದನ್ನು ಸಂಪಾದಕೀಯ ವಿಭಾಗದ ಶ್ರೀ ಪ್ರಕಾಶ್ ಇಳಂತಿಲರ ಮೂಲಕ ಹೊರಕ್ಕೆ ತಂದ ಪ್ರಯತ್ನದ ಫಲವಾಗಿ ಪುಸ್ತಕ ರೂಪವಾಗಿ "ನರಾಧಮರ ನಡುವೆ" ಎನ್ನುವ ಹೆಸರಿನಲ್ಲಿ ಇದೀಗ ಸಹೃದಯರಾದ ತಮ್ಮ ಕೈಗೆ ಈ ಪುಸ್ತಕ ಬಂದು ಸೇರಿದೆ. ಇದರ ಹಿಂದೆ ಪ್ರಯತ್ನಿಸಿದ ಶ್ರೀ ರೋಹಿತ್ ಚಕ್ರತೀರ್ಥರವರಿಗೂ, ಶ್ರೀ ಪ್ರಕಾಶ್ ಇಳಂತಿಲರಿಗೂ ನಾನು ಚಿರಋಣಿಯಾಗಿದ್ದೇನೆ. ಈ ಕೃತಿಗೆ ಮತ್ತೊಮ್ಮೆ ಪುಸ್ತಕ ರೂಪದಲ್ಲಿ ಜೀವತುಂಬಿದ ಅಯೋಧ್ಯಾ ಪ್ರಕಾಶನಕ್ಕೆ ನಾನು ಕೃತಜ್ಞಳು.

ಓರ್ವ ಸಮರ್ಥ ಪತ್ರಕರ್ತನಾಗಿ, ತಮ್ಮ ವೃತ್ತಿ ಬದುಕಿನಲ್ಲಿ ತಾವು ಕಂಡಂತಹ ಅದೆಷ್ಟೋ ಜನಾಂಗೀಯ ದ್ವೇಷಕ್ಕೆ ಒಳಗಾಗಿ ಸಂಘರ್ಷಭರಿತ ಬದುಕನ್ನು ಸಾಗಿಸುವವರ ಕಥೆಗಳನ್ನು ಕಥಾರೂಪಕ್ಕೆ ಇಳಿಸುತ್ತಾ ಬಂದಿರುವ ಮೂಲ ಲೇಖಕರಾದ ಶ್ರೀ ಮಹಾದೇವನ್ ತಂಬಿಯವರ ಸಾಮಾಜಿಕ ವಿಶ್ಲೇಷಣೆ ಮತ್ತು ಮಾನವೀಯ ಕಾಳಜಿ ಶ್ಲಾಘನೀಯವಾದುದು.

DHARMASTHALA MANJUNATHESHWARA LAW COLLEGE

ಗಾಢವಾದ ಅನುಭವಗಳು ಶಬ್ದಗಳಾಗಿ ಹೃದಯವನ್ನು ತುಂಬಿದಾಗ ಅದನ್ನು ತಮ್ಮದೇ ಆದ ವಿಭಿನ್ನ ಶೈಲಿಯಲ್ಲಿ ಹೃದಯಸ್ಪರ್ಶಿಯಾಗಿ ಭಟ್ಟಿ ಇಳಿಸುವ ಅವರ ಸಾಮರ್ಥ್ಯ ನನಗಿಲ್ಲವಾದರೂ ಮೂಲಕ್ಕೆ ಕೊರತೆಯಾಗದಂತೆ ಕನ್ನಡಕ್ಕೆ ಇಳಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇನೆ. ಇಂತಹ ಕತೆಯೊಂದನ್ನು ಸಹೃದಯ ಲೋಕಕ್ಕೆ ಕೊಟ್ಟ ತಂಬಿಯವರಿಗೆ ನಾನು ಕೃತಜ್ಞಳು.

ಇದನ್ನು ಅನುವಾದಿಸುವ ದಿವ್ಯ ಕೈಂಕರ್ಯವನ್ನು ನನಗಿತ್ತು ಪ್ರಕಟಿಸಿದ ಹೊಸದಿಗಂತ ಪತ್ರಿಕೆಗೆ ನಾನು ಆಭಾರಿ.

– ಮೀನಾಕ್ಷಿ ರಾಮಚಂದ್ರ
ಮಂಗಳೂರು

## ಕೃತಜ್ಞತೆಗಳು

ಈ ಕಿರುಕಾದಂಬರಿಯ ಮೂಲಕೃತಿಯನ್ನು ಮಲಯಾಳಂ ಭಾಷೆಯಲ್ಲಿ ಬರೆದ ಲೇಖಕ ಶ್ರೀ ಎಸ್. ಮಹಾದೇವನ್ ತಂಬಿಯವರಿಗೆ,

ಭಾವಪೂರ್ಣವಾಗಿ ಅನುವಾದಿಸಿದ ಡಾ. ಮೀನಾಕ್ಷಿ ರಾಮಚಂದ್ರ ಅವರಿಗೆ,

ಈ ಕಾದಂಬರಿಯನ್ನು "ಅಭಯಾರ್ಥಿಗಳು" ಎಂಬ ಹೆಸರಿನಲ್ಲಿ ಧಾರಾವಾಹಿ ರೂಪದಲ್ಲಿ 2008ರಷ್ಟು ಹಿಂದೆಯೇ ಪ್ರಕಟಿಸಿದ್ದ ಹೊಸ ದಿಗಂತ ಪತ್ರಿಕೆಗೆ,

ಪತ್ರಿಕೆಯ ಹಳೆ ಸಂಚಿಕೆಗಳನ್ನು ಉಗ್ರಾಣದಿಂದ ಹೊರತೆಗೆದು ನಮಗೊದಗಿಸಿದ ಪತ್ರಕರ್ತ ಮಿತ್ರರಾದ ಶ್ರೀ ಪ್ರಕಾಶ್ ಇಳಂತಿಲ ಹಾಗೂ ಶ್ರೀ ಸಂತೋಷ್ ತಮ್ಮಯ್ಯ ಅವರಿಗೆ ಹಾಗೂ ಅವರ ಪತ್ರಿಕಾಲಯದ ಸಿಬ್ಬಂದಿ ವರ್ಗಕ್ಕೆ

ನಾವು ಆಭಾರಿಗಳು.

– ಅಯೋಧ್ಯಾ ಪಬ್ಲಿಕೇಷನ್ಸ್ ಪ್ರೈ. ಲಿ.